ಕೆ.ವಿ. ಗೋವಿಂದಾಚಾರಿ, ಮೈಸೂರು

ಶಿಷ್ಯನು ಗುರುವನ್ನು ಮೀರಿಸಬೇಕು. ಮಗನು ತಂದೆಯನ್ನು ಮೀರಿಸಬೇಕು. ಮಗಳು?



'ಅತ್ತೆಯನ್ನು ಮೀರಿಸಬೇಕು' ಎಂದಳಂತೆ ಮಾಡ್ರನ್ ಮಮ್ಮಿ.

ವಾಸಣ್ಣ, ಧಾರವಾಡ

ಎಲ್ಲರಿಗೂ ಒಂದೊಂದು 'ದಿನ' ಎಂಬುದಿದೆ. ಬಡ ಜನಸಾಮಾನ್ಯರಿಗೆ ಒಂದು ದಿನ ಏಕಿಲ್ಲ?

ಅಂಥವರೆಲ್ಲಿದ್ದಾರೆ? ಎಲ್ಲರೂ 'ನನ್ನನ್ನೇನು ಸಾಮಾನ್ಯ ಅನ್ಕೋಬೇಡ' ಎನ್ನುವವರೇ.

ಆರ್.ಎಸ್. ಪವಾರ್, ಆರೆಮ್ ನಗರ

ದ್ವಾಪರದ ಬಲರಾಮನ ಸುರಾಪಾನ ಈಗಿನ ಯುವಕರಿಗೆ ಆದರ್ಶವಾಗಿದೆಯಲ್ಲ?

ಕುಂಟು ನೆಪ! ಕುಡಿದ ಬಾಟಲು ಕಂಡ ಇವರಿಗೆ ಅವನು ಹಿಡಿದ ನೇಗಿಲು ಕಾಣಲಿಲ್ಲವಲ್ಲ!

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ

ಡಕಾಯಿತನ ಚೂರಿಗೂ, ವೈದ್ಯನ ಚೂರಿಗೂ ವ್ಯತ್ಯಾಸ?




ಕೆಲವು ವೈದ್ಯರ ಚೂರಿಗಿರುವಂತೆ ಡಕಾಯಿತನ ಚೂರಿಗೆ ಮೆಡಿಕಲ್ ವಿಮೆಯ ಮೊತ್ತ ಸೆಳೆವ ತಾಕತ್ತಿಲ್ಲ.

ಕೆ.ಎನ್. ಪ್ರಭಾಕರ ಗುಪ್ತ, ಹಾಸನ

ಬಲಿ ಕೊಡುವುದು ಹೆಣ್ಣು ದೇವತೆಗಳಿಗೇ ಸೀಮಿತವೇ?

ಹಾಗೇನಿಲ್ಲ. ಕೆಲವೊಮ್ಮೆ 'ಮುಕ್ಕಣ್ಣ'ರನ್ನು (ಮುಕ್ಕುವ ಅಣ್ಣ) ಚುನಾಯಿಸಿ ದೇಶವನ್ನೇ ಬಲಿ ಕೊಡುವೆವಲ್ಲ.

ಎಂ.ಎ. ಕುಮಾರ್, ಬೆಂಗಳೂರು

ಪಾಪದ ಕೊಡ ತುಂಬುವುದಕ್ಕೂ, ಪುಣ್ಯದ ಕೊಡ ತುಂಬುವುದಕ್ಕೂ ಎಷ್ಟು ದಿವಸ ಬೇಕಾಗುತ್ತದೆ?

ಪಾಪದ್ದು ಜಲಮಂಡಳಿಯ ಕೊಡ; ದಿನವೊಂದೇ ಸಾಕು; ಪುಣ್ಯದ್ದು ತೂತು ಕೊಡ; ಜನ್ಮ ಸಾಲದು.

ಡಾ. ಕೆ. ಸೀತಾರಾಂ, ಬೆಂಗಳೂರು

ಪರಮ ಪಾಪಿ ಯಾರು? ಪರಮ ಪುಣ್ಯವಂತ ಯಾರು?

ಕ್ರಮವಾಗಿ ಸಮುದ್ರದಲ್ಲಿ ಬಿದ್ದರೂ pop up ಆಗುವವನು; ರೇಶ್ಮಿಯ ಪುತ್ರಿ ಪುಣ್ಯಳ ಪತಿ.

ಬಿ. ಬಸವರಾಜ್, ಹರಿಹರ

ರಾಜಕಾರಣಿಗಳು ಒತ್ತಡವನ್ನು ಹೇಗೆ ನಿರ್ವಹಣೆ ಮಾಡುತ್ತಾರೆ?

ಬೇರೆಯವರಿಗೆ ವರ್ಗಾಯಿಸುವ ಮೂಲಕ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಈ ವಿಭಾಗದ ಕೆಲವೇ ಪ್ರಶ್ನೆಗಳು ಹೆಚ್ಚು ಸ್ವಾರಸ್ಯದಿಂದ ಕೂಡಿರುವ ಕಾರಣ?

'ಉತ್ತರದ ಮುಂದೆ ಹೆಚ್ಚಿನ ಪ್ರಶ್ನೆಗಳು ಮಂಕಾಗುವುದರಿಂದ' ಎಂದು ನಾನಂತೂ ಹೇಳಲ್ಲಪ್ಪ!

ದಿನೇಶ್, ಗುಡ್ಡದೂರು

ಇತ್ತೀಚೆಗೆ ಪ್ರಾಣಿಗಳು ಕಾಡಿನಿಂದ ನಾಡಿಗೆ ಲಗ್ಗೆ ಇಡಲು ಕಾರಣವೇನು?

ಹೊಂಚಿ ತಿನ್ನುವ ಹುದ್ದೆಗಳಲ್ಲಿರುವ ಅವುಗಳ ಬಂಧುಗಳನ್ನು ಕಾಣಲಂತೆ.

ಎಂ.ಜಿ. ಉಮಾ, ಬಳ್ಳಾರಿ

ಅರಮನೆಗಿಂತ ಸೆರೆಮನೆ ಲೇಸು. ಯಾರಿಗೆ?

ಅರಮನೆಯಂತಹ ಮನೆಗೂ ನುಗ್ಗಿ ಕೊಲ್ಲಬಹುದೆಂಬ ಭಯವಿರುವ ರೌಡಿ ಶೀಟರ್‌ಗೆ.

ಎಸ್. ಶರತ್, ಬೆಂಗಳೂರು

ಮಳೆಗಾಲದಲ್ಲೆ ಹುಳು ಹುಪ್ಪಟೆಗಳು ಹೆಚ್ಚಿರಲು ಕಾರಣವೇನು?

ಬೇಸಿಗೆಯ ಬೆವರನ್ನು ಮಳೆಯಲ್ಲಿ ಸ್ನಾನ ಮಾಡಿ ತೊಳೆದುಕೊಳ್ಳಲು ಹೊರಬರುವವಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಇದು ಯಾರಿಗೆ ಹೊಂದುತ್ತೆ?

ಏಳು ಗಂಟೆಗೆ ಹಿಲ್ ರೆಸಾರ್ಟಿಗೆ ಹೋಗಿ ನಾಲ್ಕು ಗಂಟೆಗೆ ಇಳಿದವನಿಗೆ.

## ಬಹುಮಾನಿತ ಪ್ರಶ್ನೆ

ಕಾವ್ಯಶ್ರೀ, ಶೋರಾಪುರ

ಮನೆಗೆ 'ನೆಮ್ಮದಿ' ಎಂದು ಹೆಸರಿಟ್ಟಿದ್ದಾರೆ. ಆದರೆ ದಂಪತಿ ಸದಾ ಕಚ್ಚಾಡುತ್ತಾರಲ್ಲಾ?

ಅದು ಕಚ್ಚಾಟವಲ್ಲ, ನೆಮ್ಮದಿ ಹೊಂದುವುದು ಹೇಗೆ ಎಂಬುದರ ಬಗ್ಗೆ ಚರ್ಚೆ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಆಸೆಗಳು ಇಲ್ಲದ ಜೀವನ ಇರಲು ಸಾಧ್ಯವೆ?

ಹೂಂ. ಕೋಮಾ ಸ್ಟೇಜ್ ತಲುಪಿದಾಗ.

ಪಿ.ಜೆ. ರಾಘವೇಂದ್ರ, ಮೈಸೂರು

ನೆರೆರಾಜ್ಯದ ಸಿಎಂ ಈರಭದ್ರ, ಆದರೆ ಕೋಡಂಗಿ ಯಾರು?

ಒಂದಲ್ಲ, ಲಕ್ಷಾಂತರ ಮತದಾರರು.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಹೆಣ್ಣಿಗೂ, ಕಣ್ಣಿಗೂ ಇರುವ ವ್ಯತ್ಯಾಸವೇನು?



ಕಣ್ಣು ವರ್ತಮಾನವನ್ನು ತೋರಿಸುತ್ತದೆ; ಹೆಣ್ಣು ವರ್ತಮಾನ ನೀಡಿ, ಭೂತ ಬಿಡಿಸಿ, ಭವಿಷ್ಯ ತೋರಬಲ್ಲಳು.

ಮೃತ್ಯುಂಜಯ ಎ., ಪಾಂಡವಪುರ

'ಪ್ರಾಮಾಣಿಕತೆ' ಈ ಪದಕ್ಕೆ ಬೆಲೆ ಯಾವಾಗ ಸಿಗಬಹುದು?

ಅದೊಂದೇ ಪದವಿರುವ ಬೋರ್ಡ್ ಬರೆಸಿದಾಗ, ಬರೆದವನಿಗೆ.

ಬಿ.ಆರ್. ಉಷಾ, ಬೆಂಗಳೂರು

ಇರುವಾಗ ಅಳಿಸ್ತಾರೆ. ಸತ್ತಾಗ ಅಳ್ತಾರೆ. ಏಕೆ?

ಅದು 'ಮಾತು ಕೇಳಲಿಲ್ಲ' ಎಂದು. ಇದು 'ಮಾತು ಕೇಳಲು ಇಲ್ಲ' ಎಂದು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ

ಮುಂದೆ ಸೇಬು ತಿನ್ನಲು ಕೊಟ್ಟು ಹಿಂದೆ ರಕ್ತ ಹೀರುವ ಜನಕ್ಕೆ ಏನೆನ್ನಬೇಕು?

ಮಾರ್ಕೆಟಿಂಗ್ ಎಕ್ಸ್‌ಪರ್ಟ್ಸ್.

■ ರಾಮ್